# ಶ್ರೀಉ.ವೇ. ಕೋಟಿಕನ್ಯಾದಾನಂ ವಾಸುದೇವತಾತಾಚಾರ್ಯ ಸ್ವಾಮಿಗಳಿಂದ ರಚಿತವಾದ

## ಆಯುಷ್ಯಹೋಮ ಪ್ರಯೋಗದ ಬಗ್ಗೆ ನನ್ನ ಅನಿಸಿಕೆಗಳು

ವೇದವಾರಿಧಿ ಪ. ರಾಮಾನುಜನ್, ಬೆಂಗಳೂರು

'ಧರ್ಮಃ ಶ್ರುತೋ ವಾ ದೃಷ್ಟೋ ವಾ ಸ್ಮೃತೋ ವಾ ಕಥಿತೋಪಿ ವಾ . ಅನುಮೋದಿತೋ ವಾ ರಾಜೇಂದ್ರ ಪುನಾತಿ ಪುರುಷಂ ಸದಾ' ಎಂದು ಶಾಸ್ತ್ರಗಳು ತಿಳಿಸುತ್ತವೆ. ಅಂದರೆ ಒಳ್ಳೆಯ (ಧರ್ಮ) ಕೆಲಸವನ್ನು ಕೇಳಿದರೂ, ನೋಡಿದರೂ, ನೆನೆಸಿದರೂ, ಹೇಳಿದರೂ, ಒಳ್ಳೆಯದೆಂದು ಒಪ್ಪಿಗೆ ಕೊಟ್ಟರೂ, ಆ ಸತ್ಕಾರ್ಯದ (ಧರ್ಮದ) ಸಂಗವೇ ಮನುಷ್ಯನಿಗೆ ಸದಾ ಪಾವನವಾದುದು. ಈ ದೃಷ್ಟಿಯಲ್ಲಿ ನಮ್ಮ ಶ್ರೀ. ಉ.ವೇ. ವಾಸುದೇವ ತಾತಾಚಾರ್ಯ ಸ್ವಾಮಿಗಳು ವೈದಿಕರೆಲ್ಲರಿಗೂ ಬಹಳ ಉಪಯುಕ್ತವಾದ ಒಂದು ಕೈಂಕರ್ಯವನ್ನು, ಅಂದರೆ, ವೈದಿಕ ಪ್ರಕ್ರಿಯೆಯಿಂದ ಆಯುಷ್ಯಹೋಮ ಮಾಡುವ ವಿಧಾನವನ್ನು ಕನ್ನಡದಲ್ಲಿ ಅಂದವಾಗಿ ಅಚ್ಚು ಹಾಕಿಸಿ, ಸವಿವರಣವಾಗಿ ವಿಷಯಗಳನ್ನು ಪ್ರತಿಪಾದನೆ ಮಾಡುವ ಧರ್ಮವನ್ನು ಮಾಡಿದ್ದಾರೆ.

ಪುರೋಹಿತರಿಗೆ ವೇದಗಳಲ್ಲಿ ಬಹಳ ಆದ್ಯತೆ ಕೊಡಲಾಗಿದೆ. ಅದುವೂ ಸಹ ಕಾರಣವಿಲ್ಲದೆ ಅಲ್ಲ. ಉದಾಹರಣೆಗೆ, ಋಗ್ವೇದದ ಮೊದಲ ಋಕ್ಕಿನಲ್ಲೇ ಪರಮಾತ್ಮನಿಗೆ ಪ್ರಪ್ರಥಮವಾಗಿ ಬಳಸಿದ ವಿಶೇಷಣವೆಂದರೆ 'ಪುರೋಹಿತ' ಎಂಬುದೇ ಆಗಿದೆ. ಈ ಶಬ್ದದ ನಿರ್ವಚನವನ್ನೂ, ಇದರ ತಾತ್ಪರ್ಯವನ್ನೂ ಅರಿತರೆ, ಶ್ರೌತ, ಸ್ಮಾರ್ತ ಕರ್ಮಗಳ ಮಾರ್ಗದರ್ಶಿಗಳಾಗಿ ಇಂದು ಸಮಾಜದಲ್ಲಿ ಪುರೋಹಿತರೆನಿಸಿ ಕೊಂಡವರ ಹೊಣೆಯೂ ಅವರಲ್ಲಿ ಸಮಾಜ ತೋರಬೋಕಾದ ಕೃತಜ್ಞತಾಭಾವವೂ ಅರಿವಾಗುವುದು. ಹೀಗಿರುವ ವೃತ್ತಿಯ ಶ್ರೇಷ್ಠ್ಯವನ್ನೂ ತಿಳಿಯಬೇಕು. ಮತ್ತೆ, ಮನುಷ್ಯರು ಕಾಮನೆ ಮಾಡುವ ವಿಷಯಗಳೆಲ್ಲಕ್ಕೂ ಮೂಲವಾಗಿರುವ ದೀರ್ಘಾಯುಸ್ಸನ್ನು ಕ್ರಮವಾಗಿ ಸಾಧಿಸುವ ಆಯುಷ್ಯಹೋಮದ ಬಗ್ಗೆಯೂ ತಿಳಿದಾಗ, ಈ ಪ್ರಕೃತ ಕೃತಿಯ ವೈಶಿಷ್ಟ್ಯ ಮನದಟ್ಟಾಗುತ್ತೆ. ಆಗ, ಮೇಲೆ ಹೇಳಿದ ಧರ್ಮದ ಅನುಮೋದನೆಯ ಫಲ ದೊರೆಯುತ್ತೆ.

ತೈತ್ತಿರೀಯ ಸಂಹಿತೆಯಲ್ಲಿ 'ಬೃಹಸ್ಪತಿರಕಾಮಯತ ಶ್ರನ್ಮೇ ದೇವಾ ದಧೀರನ್, ಗಚ್ಛೇಯಂ ಪುರೋಧಾಮಿತಿ' (೭.೪.೧) ಎಂಬ ಪ್ರಕರಣದಲ್ಲಿ ಬೃಹಸ್ಪತ್ಯಾಚಾರ್ಯರು ದೇವತೆಗಳು ತನ್ನನ್ನು ನಂಬಬೇಕು, ತಾನು ಅವರಿಗೆ ಪುರೋಹಿತನೂ, ಅವರಲ್ಲಿ ಪ್ರಧಾನನೂ ಆಗಬೇಕೆಂದು ಕೋರಿ ೨೪

ರಾತ್ರಿಗಳಲ್ಲಿ ಮಾಡುವ ಒಂದು ಸತ್ರ(ಯಾಗ)ವನ್ನು ಮಾಡಿ ಆ ಕೋರಿಕೆಯನ್ನು ಈಡೇರಿಸಿಕೊಂಡರೆಂದು ಹೇಳಿ, ಹೀಗೆ ಯಾರು ಈ ಚತುರ್ವಿಂಶತಿರಾತ್ರ ಸತ್ರವನ್ನು ಆಚರಿಸುವರೋ ಅವರನ್ನು ಮನುಷ್ಯರು ನಂಬುವರು, ಅವರು ಮನುಷ್ಯರಲ್ಲಿ ಪ್ರಧಾನರೂ, ಅವರಿಗೆ ಪುರೋಹಿತರೂ ಆಗುವರೆಂದಿದೆ. ('ಶ್ರದೇಭ್ಯೋ ಮನುಷ್ಯಾ ದಧತೇ, ಗಚ್ಛನ್ತಿ ಪುರೋಧಾಮ್'). ಇಲ್ಲಿ ನಂಬುವುದೆಂದರೆ, ಇವರು ಸತ್ಯಾಂಶವನ್ನು ಯಥಾವತ್ತಾಗಿ ಅರಿತವರು, ಅರಿತಿರುವ ಹಾಗೇ ಹೇಳುವರು, ಅವರು ನಮ್ಮ ಹಿತವನ್ನು ಕೋರಿ ನಮಗೆ ಶ್ರೇಯಸ್ಸನ್ನು ವಿಧಿಸುತ್ತಿರುವರು, ಅದರಂತೆ ಅನುಷ್ಠಿಸುವುದು ನಮಗೆ ಒಳಿತೆಂದನಿಸಿ ಅಂತಹ ಅನುಷ್ಠಾನದಿಂದ ಅಭೀಷ್ಟಗಳನ್ನು ಪಡೆಯುವುದು. ಶ್ರತ್ ಎಂದರೆ, ಸತ್ಯ, ಅದನ್ನು ಇಡುವುದು ಶ್ರದ್ಧೆಯೆನಿಸಿ ಸತ್ಯವೆಂಬ ನಂಬಿಕೆ ಮತ್ತು ಕೋರಿಕೆ ('ಶ್ರದ್ಧಾ ಸಂಪ್ರತ್ಯಯಃ ಸ್ಪೃಹಾ' - ಅಮರ ೩.೩.೧೦೨)ಯನ್ನು ಸೂಚಿಸುತ್ತದೆ. ಹೀಗೇ 'ಭೂಯಿಷ್ಠಂ ಮೇ ಶ್ರದ್ದಧೀರನ್ . ಭೂಯಿಷ್ಠಾ ದಕ್ಷಿಣಾ ನಯೇಯುರಿತಿ .... ಭೂಯಿಷ್ಠಮೇವಾಸ್ಮೈ ಶ್ರದ್ದಧತೇ . ಭೂಯಿಷ್ಠಾ ದಕ್ಷಿಣಾ ನಯನ್ತಿ .' (ತೈ. ಕಾಠಕ ೧.೮.೮,೯) ಎಂದು ಇದರಿಂದ, ಅಂದರೆ, ನಂಬಿಕೆಗೆ ಅರ್ಹನಿಗೆ ಹೆಚ್ಚು ದಕ್ಷಿಣೆಯನ್ನೂ ಕೊಡುವರೆಂದಿದೆ. ಹೀಗೆ ಇಬ್ಬರಿಗೂ (ಯಜಮಾನ, ಪುರೋಹಿತ) ಸಾಫಲ್ಯಮೊದಗುವುದು.

'ಮರ್ಯಾದಾಕರತ್ವಾತ್ ಪ್ರಪುರೋಧಾಮ್ . ಬ್ರಾಹ್ಮಣ ಆಪ್ನೋತಿ .' (ತೈ. ಆ.೧.೬.೨), 'ಯಃ ಪುರೋಧಾಕಾಮಃ ಸ್ಯಾತ್ . ಸ ಬೃಹಸ್ಪತಿಸವೇನ ಯಜೇತ . ಪುರೋಧಾಮೇವ ಗಚ್ಛತಿ .' (ತೈ.ಬ್ರಾ. ೨.೭.೧) ಹಾಗೂ 'ಪುರೋಧಾಯಾಂ ಸ್ಪರ್ಧಮಾನಃ ... ಪುರ ಏನಂ ದಧತೇ' (ತೈ.ಸಂ. ೨.೧.೨.೯) ಎಂಬೆಡೆಗಳಲ್ಲಿ ಪುರೋಹಿತ ಮುಂಬರುವ ಫಲಗಳನ್ನು ಅರಿತು ಸೂಚಿಸಿ, ತಕ್ಕ ಉಪಾಯಗಳನ್ನು ವಿಧಿಸುವನೆಂದು ಅವನ ಮಾಹಾತ್ಮ್ಯ ಹೇಳಲ್ಪಟ್ಟಿದೆ. ಸಾಮಾನ್ಯವಾಗಿ ಇಂದ್ರನನ್ನು ಋಷಿಗಳೂ ಸಹ ಪ್ರತ್ಯಕ್ಷವಾಗಿ ನೋಡಲಾರದಿದ್ದು ವಸಿಷ್ಠರು ಮಾತ್ರ ಅವನನ್ನು ಪ್ರತ್ಯಕ್ಷವಾಗಿ ಕಾಣಲು ಸಮರ್ಥರಾದ್ದರಿಂದ ಅವರು ಪುರೋಹಿತಶ್ರೇಷ್ಠರೆನಿಸಿರುವರು (ತೈ.ಸಂ. ೩.೫.೨.೧). ಇವರೆಲ್ಲ ಗೌರವಾರ್ಹರಾದದ್ದು 'மந்திரிக்கு அழகு வரும்பொருள் உரைத்தல்' ಎಂದು ತಮಿಳಿನಲ್ಲಿ ಗಾದೆ ಇರುವಂತೆ ಮುಂಜಾಗ್ರತೆಯಿಂದಿದ್ದು ಇಷ್ಟಪ್ರಾಪ್ತಿ, ಅನಿಷ್ಟನಿವಾರಣೆಗಳನ್ನು ಪಡೆಯಲು ಸಾಧನವಾದ್ದರಿಂದ.

ಇದರಂತೆಯೇ ದೀರ್ಘಾಯುಸ್ಸಿದ್ದರೆ ಮಾತ್ರ ಎಲ್ಲ ಕಾಮನೆಗಳನ್ನೂ ಅನುಭವಿಸುವುದಕ್ಕೆ ಸಾಧ್ಯವಾದ್ದರಿಂದ ಶ್ರೀಯುತರಾದ ಪ್ರಸಿದ್ಧ ಪುರೋಹಿತ ಮತ್ತು ವೇದವಿದ್ವಾಂಸರಾದ ವಾಸುದೇವ ತಾತಾಚಾರ್ಯಸ್ವಾಮಿಗಳು ಈ ಕೃತಿಯಲ್ಲಿ ಪುರೋಹಿತರು ಮೃತ್ಯುಪರಿಹಾರ ಹಾಗೂ ಆಯುರ್ವೃದ್ಧಿಗೆ ಮಹರ್ಷಿಗಳು ವಿಧಿಸಿರುವ ಆಯುಷ್ಯಹೋಮ ಪ್ರಯೋಗವನ್ನು ಕನ್ನಡದಲ್ಲಿ ವಿಸ್ತಾರವಾಗಿ, ಅಂದವಾಗಿ

ಮತ್ತು ಪ್ರಾಮಾಣಿಕವಾಗಿ ಕಲ್ಪಿ   ಕೊಟ್ಟಿರುವುದು ನಮಗೆಲ್ಲ ಪರಮೋಪಕಾರವಾಗಿದೆ. ಇದನ್ನು ಎಲ್ಲರೂ ಸ್ವಾಗತಿಸಿ, ಉಪಯೋಗಿಸಿ, ಆನಂದಿಸಲಿ ಎಂದೂ ಶ್ರೀಯುತರಿಗೆ ಹೀಗೇ ಇನ್ನೂ ಅನೇಕ ಪ್ರಯೋಗಗ್ರಂಥಗಳನ್ನೂ ಕನ್ನಡದಲ್ಲಿ ಅಚ್ಚುಹಾಕುವ ಹಂಬಲದಲ್ಲೂ ಸಾಫಲ್ಯ ದೊರಕಲಿ ಎಂದೂ ಹಾರೈಸುತ್ತೇನೆ.

ಇಂತೀ ಪ್ರಣಾಮಗಳೊಂದಿಗೆ,

ಶೋಹತ್ತೂರ್ ಪರಾಂಕುಶಾಚಾರ್ಯ ರಾಮಾನುಜನ್